ಪ್ರಜಾವಾಣಿ

Thursday, March 11th, 2010

# ಶಿಕ್ಷಣ; ಯೋಚನಾ ಕ್ರಮ ಬದಲಾಗಬೇಕು: ಡಾ. ಅತ್ರೆ

**ಬೆಂಗಳೂರು:** ‘ಪ್ರಸ್ತುತ ಶೈಕ್ಷಣಿಕ ಕ್ಷೇತ್ರ ಬಲಗೊಳ್ಳಬೇಕೆಂದರೆ ನಮ್ಮ ಯೋಚನಾ ಕ್ರಮ ಬದಲಾಗಬೇಕು’ ಎಂದು ವಿಜ್ಞಾನಿ ಡಾ. ವಿ.ಕೆ. ಅತ್ರೆ ತಿಳಿಸಿದರು.

ನಗರದ ಜೈನ್ ವಿಶ್ವವಿದ್ಯಾಲಯ ‘ರಾಷ್ಟ್ರೀಯ ವಿಜ್ಞಾನ ದಿನಾಚರಣೆ’ ಅಂಗವಾಗಿ ಸೋಮವಾರ ಹಮ್ಮಿಕೊಂಡಿದ್ದ ವಿಜ್ಞಾನಿ ಸರ್. ಸಿ.ವಿ.ರಾಮನ್ ಸ್ಮರಣಾರ್ಥ ಉಪನ್ಯಾಸ ಸರಣಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ವಿಜ್ಞಾನ ಸಾಧಕವೂ ಹೌದು. ಬಾಧಕವೂ ಹೌದು. ಆದರೆ ಅದನ್ನು ಬಳಸಿಕೊಳ್ಳುವಲ್ಲಿ ಜಾಣ್ಮೆ ಅಡಗಿದೆ’ ಎಂದರು.

‘ಭಾರತದಲ್ಲಿ ಶೇ 40 ರಷ್ಟು ಮಧುಮೇಹಿಗಳಿದ್ದಾರೆ. ಮೈಕ್ರೋ–ಎಲೆಕ್ಟ್ರೋ–ಮೆಕ್ಯಾನಿಕಲ್ ಸಿಸ್ಟಂ ಮೂಲಕ ಇನ್ಸುಲಿನ್ ಉತ್ಪಾದನೆ ನಮ್ಮಲ್ಲಿ ಯಾಕೆ ಸಾಧ್ಯವಾಗುತ್ತಿಲ್ಲ?’ ಎಂದು ಪ್ರಶ್ನಿಸಿದರು. ವಿಜ್ಞಾನಿ ಡಾ. ವಾಸುದೇವ್ ಕಲ್ಕುಂಟೆ ಉಪಸ್ಥಿತರಿದ್ದರು.